ಬಸ್ಸಿನಲ್ಲಿ ಹೊರಟೆವು. ನಮ್ಮ ಮಿನಿ ಬಸ್ ಕ್ರೂಗರ್ ತಲುಪಿದಾಗ ಮಧ್ಯಾಹ್ನದ ಎರಡೂವರೆ. ವ್ಯಾನಿನಿಂದ ಇಳಿದಾಗ ನಮಗೆ ಉಸಿರು ತೆಗೆದುಕೊಳ್ಳಲೂ ಪುರುಸೊತ್ತಿರಲಿಲ್ಲ. ಲಗುಬಗೆಯಲ್ಲಿ ನಮಗಾಗಿಯೇ ಕಾದು ನಿಂತಿದ್ದ ತೆರೆದ ವಾಹನವನ್ನೇರಿದೆವು. ಹೊಸ ಗಾಡಿಯ ಸೀಟು ಎಷ್ಟು ಎತ್ತರದಲ್ಲಿತ್ತೆಂದರೆ ಪ್ರವಾಸಿಗರು ಅದನ್ನು ಹತ್ತಿ ಕೂರಲು ಕುಶಲತೆ ಇರಬೇಕು. ಜೀಪಿನಲ್ಲಿದ್ದವಳು ಪ್ರಿಟೋರಿಯಾದಿಂದ ಬಂದ ಯುವತಿ ರೇಚಲ್. ನಮ್ಮ ಮಾರ್ಗದರ್ಶಿ ಕೀಗನ್ ವಾಹನ ಸಂಚಾಲಕನೂ ಹೌದು. ಇವರಿಬ್ಬರ ಜೊತೆಗೆ ನಾವಿಬ್ಬರು ಸೇರಿಕೊಂಡೆವು. ನಮಗೆ ಬೆಳಗಿನ ಪ್ರಯಾಣದ ಬಳಲಿಕೆ ಹೊಸಗಾಡಿಯಲ್ಲಿ ಕೂತ ಕ್ಷಣದಲ್ಲೇ ಗಾಳಿಯಲ್ಲಿ ತೂರಿಹೋಯ್ತು. ಕಾಡಿನ ದಿಕ್ಕಿನತ್ತ ಹೊರಡುತ್ತೇವೆ ಎಂದು ತಿಳಿದಾಕ್ಷಣ ನನ್ನ ಮನಸ್ಸು, ಹುಚ್ಚು ಮನಸ್ಸಿನ ಹುಡುಗಿಯಂತೆ ಗರಿಗೆದರಿತು. ಆಗಷ್ಟೇ ಕಾಡಿನ ವಲಯ ಆರಂಭವಾಗಿತ್ತು. ವನ್ಯಜೀವಿಗಳ ಬಗ್ಗೆ ನಾನು ಆಗಲೇ ಪ್ರಶ್ನೆಗಳನ್ನು ಕೇಳಲು ಆರಂಭಿಸಿಯೇ ಬಿಟ್ಟಿದ್ದೆ.

## ನೋಡಿದಷ್ಟೂ ಕಾಡು...

'Its Mine, Its yours', 'Xa Mina, I xaWena' – ಫಲಕ ಹೊತ್ತ ಬೋರ್ಡು ಕಾಡಿಗೆ ಪ್ರವೇಶಿಸುವ ಪ್ರವಾಸಿಗರನ್ನು ಸ್ವಾಗತಿಸುತ್ತದೆ. ದಕ್ಷಿಣ ಆಫ್ರಿಕಾದ ಕಾಡುಪ್ರದೇಶ, ನಮ್ಮ ದೇಶದ ಹಸಿರುಗಿಡ ಮರಗಳ ಕಾಡಿಗಿಂತ ಭಿನ್ನ. ಮಟ್ಟಸವಾದ ಭೂಪ್ರದೇಶ. ಕಣ್ಣಾಡಿಸಿದತ್ತ ಕಾಣುವ ಬೋಳುಮರಗಳ ಸಂಖ್ಯೆಯೇ ಹೆಚ್ಚು. ಅಲ್ಲಲ್ಲಿ ವಿರಳವಾಗಿ ಕಾಣುವ ಹಸಿರಿನ ಚಿಗುರು. ಕಣ್ಣು ಹಾಯಿಸಿದಷ್ಟು ದೂರದವರೆಗೂ ಮಂಡಿ ಎತ್ತರದವರೆಗೂ ಬೆಳೆದ ಬಂಗಾರದ ಬಣ್ಣದ ಜೊಂಡುಹುಲ್ಲು. ಚಿಗುರುವ ಕಾಲದಲ್ಲಿ ಕ್ರೂಗರ್ ಹಸಿರು ಕಾರ್ಪೆಟ್ ಹೊದೆಯಬಹುದೇನೋ?

ಕಾಡು ಪ್ರವೇಶಿಸಿದೊಡನೆಯೇ ದೂರದಲ್ಲಿ ಕಾಣುತ್ತಿದ್ದ ಹುಲ್ಲುಹಾಸಿನ ಮೇಲೆ ಪುರುಸೊತ್ತಾಗಿ ಬಿದ್ದುಕೊಂಡಿದ್ದ ಕಾಡುನಾಯಿಗಳು ಕಂಡವು. ಈ ಪ್ರಾಣಿ ಅಪರೂಪವಾಗಿ ಕಾಣಿಸಿಕೊಳ್ಳುತ್ತದೆ ಎಂದು ಕೀಗನ್‌ನ ಅಭಿಪ್ರಾಯ. ಇದೇ ಕಾರಣಕ್ಕಾಗಿಯೇ ಏನೋ – ಕಾಡಿನ ಮಾರ್ಗದರ್ಶಿಗಳಿಗೆ ಕಾಡುನಾಯಿಗಳು ಅಚ್ಚುಮೆಚ್ಚು.

ಕಾಡುನಾಯಿಗಳು ಗುಂಪುಗಳಲ್ಲಿ ಜೀವಿಸುತ್ತವೆ. ಹೆಣ್ಣು–ಗಂಡಿನ ಜೋಡಿ ಗುಂಪುಗಳ ನಾಯಕಪಾತ್ರ ವಹಿಸುತ್ತದೆ. ಈ ಜೋಡಿ ಬದುಕಿರುವವರೆಗೂ ಜೊತೆಗಾರರನ್ನು ಬದಲಾಯಿಸುವುದಿಲ್ಲ. ವಾಸಿಸುವ ಸ್ಥಳವನ್ನು ಪದೇಪದೇ ಬದಲಾಯಿಸುವ ಚಟವಿಲ್ಲದ ಈ ಪ್ರಾಣಿಗಳು ಅರಣ್ಯಧಾಮದಲ್ಲಿ ನಾವಿದ್ದ ಮೂರುದಿನಗಳೂ ಮರದ ಕೆಳಗೆ ಯಥಾಸ್ಥಿತಿಯಲ್ಲಿ ಕಾಣಿಸಿಕೊಳ್ಳುತ್ತಿದ್ದವು. ಕಂದು, ಕಪ್ಪು ಹಾಗೂ ಬಂಗಾರದ ಬಣ್ಣಗಳ ಕಾಡುನಾಯಿಗಳ ಕಿವಿಗಳ ದೊಡ್ಡ ಆಕಾರವು ನೋಡುಗರ ಗಮನ ಸೆಳೆಯುತ್ತದೆ.

ಕಾಡಿನಲ್ಲಿ ಮುಂದುವರೆದಂತೆ ಒಣಮರಗಳ ಗುಂಪು ಹೆಚ್ಚಾಗಿತ್ತು. ವಾಹನದ ವೇಗ ಕಡಿಮೆಯಾಯಿತು. ಮಾರ್ಗದರ್ಶಿ ಗಾಡಿಯನ್ನು ಮಧ್ಯ ರಸ್ತೆಯಲ್ಲಿ ನಿಲ್ಲಿಸಿಯೇ ಬಿಟ್ಟ. ಸ್ವಲ್ಪ ದಟ್ಟವಾಗಿದ್ದ ಮರಗಳ ಹಿಂದೆ ಆನೆಗಳ ಹಿಂಡೇ ಇತ್ತು. ಒಂದರ ನಂತರ ಮತ್ತೊಂದರಂತೆ ಮುಂದೆ ನಿಂತಿದ್ದ ನಮ್ಮ ವಾಹನವನ್ನು ಲೆಕ್ಕಿಸದೆ ನಿರಾತಂಕವಾಗಿ ಮೆರವಣಿಗೆ ಹೊರಟಿದ್ದವು. ಕಣ್ಣ ಮುಂದೆ ನಡೆಯುತ್ತಿದ್ದ ದಿಬ್ಬಣ ನಮ್ಮ ಕಣ್ಣುಗಳಿಗೆ ಹಬ್ಬವಾಯ್ತು. ಆಫ್ರಿಕಾದ ಆನೆಗಳು ಹೆಚ್ಚು ಎತ್ತರದವು. ಇಲ್ಲಿನ ಆನೆಗಳ ಗುಂಪು ಹೆಣ್ಣನ್ನು ನಾಯಕಿಯಾಗಿ ಸ್ವೀಕರಿಸುತ್ತವೆ. ನಮ್ಮ ವಾಹನದ ಮುಂದೆ ನಡೆಯುತ್ತಿದ್ದ ಧೀಮಂತ ನಡಿಗೆಯ ಆನೆಗಳ ಸಾಲಿನಲ್ಲಿದ್ದುದೂ ಮೊದಲಿಗೆ ಹೆಣ್ಣಾನೆ. ತಾಯಿಯ ಹಿಂದೆ ಎರಡು ಮರಿಗಳು ಪುಟಿಯುತ್ತಾ, ಕಾಲು ಕಾಲಿಗೆ ಸಿಕ್ಕುವಂತೆ ಓಡಿದವು. ವಿದೇಶಪ್ರಯಾಣ ಮಾಡುವ ಮುನ್ನ ನನ್ನಪ್ಪನಿಗೆ ಫೋನಾಯಿಸಿದ್ದೆ. ಅವರು ತಮಗಾಗಿ 'ಮರಿಯಾನೆಯೊಂದನ್ನು ತಂದುಕೊಡು!' ಎಂಬ ಬೇಡಿಕೆ ಇಟ್ಟಿದ್ದರು. ಕಣ್ಣ ಮುಂದೆಯೇ ನಡೆಯುತ್ತಿದ್ದ ಮುದ್ದುಮರಿಗಳಲ್ಲಿ ಒಂದನ್ನು ಎತ್ತಿ ವ್ಯಾನಿಗೆ ಹಾಕಿಕೊಳ್ಳಲೇ ಎನ್ನಿಸಿತು! ಅಷ್ಟರಲ್ಲೇ ಅಲ್ಲಿ ಗಂಡಾನೆ ಉಳಿದೆಲ್ಲ ಸಹಚರರಿಗಿಂತಲೂ ಹಿಂದೆ ಕಾಣಿಸಿಕೊಂಡಿತು. ಮನುಷ್ಯರಲ್ಲಿ ಗಂಡು, ಹೆಣ್ಣಿನ ಎಲ್ಲಾ ಅಪ್ಪಣೆಗಳನ್ನು ಕೇಳಿಸಿಕೊಳ್ಳಲಾರ, ಆನೆಗಳಲ್ಲಿ ಹೇಗಿರಬಹುದು?

ಕಾಡಿನಲ್ಲಿ ಜಿಂಕೆಗಳ ಸಂಖ್ಯೆ ಅಪಾರವಾಗಿದೆ. ನಾವು ದೃಷ್ಟಿ ಹಾಯಿಸಿದಲ್ಲಿ, ತಮ್ಮ ದೊಡ್ಡ ಕಣ್ಣುಗಳನ್ನೆತ್ತಿ 'ನೀವು ಯಾರು' ಎಂದು ಕೇಳುವಂತೆ ಕಾಣಿಸುತ್ತವೆ. ಪ್ರಯಾಸಪಟ್ಟು ಗಮನಿಸಿದರೆ, ಒಣಎಲೆಗಳ ಬಣ್ಣದಲ್ಲಿಯೇ ಇರುವ 'ಕುಡು' ಎಂಬ ಪ್ರಾಣಿ ಕಾಣುತ್ತದೆ. ಗಂಡುಕುಡುವಿನ



ಎಂದೋ ಅಗಲಿದ ಆಪ್ತರನ್ನು ಆತುಕೊಂಡಂತೆ ಲೇಖಕಿಗೆ ತೆಕ್ಕೆ ಬಿದ್ದಿರುವ ಬಾಲಕ

ಸೌಂದರ್ಯವನ್ನು ಕಣ್ತುಂಬ ನೋಡಿಯೇ ಸವಿಯಬೇಕು. ಪ್ರಾಣಿಜಾತಿಯಲ್ಲಿ ಗಂಡಿನ ಸೌಂದರ್ಯಕ್ಕೇ ಮೊದಲ ಆದ್ಯತೆ. ಗಂಡುಜಾತಿ ತಮ್ಮ ವಿಶಿಷ್ಟ ಸೌಂದರ್ಯವನ್ನು ಹೆಣ್ಣನ್ನು ವಶಪಡಿಸಿಕೊಳ್ಳುವುದಕ್ಕೆ ಮೀಸಲಾಗಿಟ್ಟಿರುತ್ತದೆ.

## ಸ್ವರ್ಗದ ಹಾದಿಯಲ್ಲಿ...

ಕಾಡಿನಲ್ಲಿ ಮೊದಲರ್ಧ ದಿನದ ಸಂಚಾರ ಮುಗಿಸಿದಾಗ ದೇಹದ ದಣಿವಿಗಿಂತಲೂ ಉಲ್ಲಾಸವೇ ಹೆಚ್ಚಾಗಿತ್ತು. ಫೋಟೋಗಳಲ್ಲಿ, ಪ್ರಾಣಿಸಂಗ್ರಹಾಲಯಗಳಲ್ಲಿ ಕಾಣುವ ಭವ್ಯವಾದ ದೊಡ್ಡ ದೊಡ್ಡ ಪ್ರಾಣಿಗಳನ್ನು ಅವುಗಳ ನೈಸರ್ಗಿಕ ನೆಲೆಯಲ್ಲೇ ನೋಡುವುದು ಭೂಮಿಯ ಮೇಲಿನ ಸ್ವರ್ಗವೆನ್ನದೆ ಮತ್ತೇನು.

ಮರುದಿನ ನಸುಕಿನ ಐದೂವರೆ ಗಂಟೆಗೆ ಕಾಡಿನ ಸೌಂದರ್ಯ ಆಗಷ್ಟೇ ಅರಳುತ್ತಿತ್ತು. ಕೆಂಪು, ಕೆಂಪಾಗಿ ಲಜ್ಜೆಗೊಂಡ ಹೆಣ್ಣಿನಂತೆ ಸೂರ್ಯ ಉದಯಿಸುತ್ತಿದ್ದ. ಪ್ರಾಣಿಗಳು ಆಹಾರ ಹುಡುಕುವ ಸಮಯವದು. ಪ್ರಾಣಿ ಪಕ್ಷಿಗಳು ತಮ್ಮ ತಮ್ಮ ಗೂಡು–ಗುಹೆ, ಪೊಟರೆಗಳಿಂದ ಹೊರಬರುವ ಹೊತ್ತು ಅದು. ಕಾಡಿನಲ್ಲಿ ಕೆಲವೇ ಕಿಲೋಮೀಟರ್‌ಗಳಷ್ಟು ಪ್ರಯಾಣಿಸಿದ್ದೇವಷ್ಟೆ – 'ನನ್ನನ್ನು ನೋಡು' ಎಂಬ ಠೇಂಕಾರದಿಂದ ಜಿರಾಫೆಯೊಂದು ನಡುರಸ್ತೆಯಲ್ಲಿ ನಡೆಯುತ್ತಿತ್ತು. ಆ ನಡಿಗೆಯ ವೈಯಾರವನ್ನು ಅನುಸರಿಸಲು ಹುಲುಮಾನವರಿಗೆ ಸಾಧ್ಯವೇ ಇಲ್ಲದ ಮಾತು. ಈ ಪ್ರಾಣಿಯ ಸೌಂದರ್ಯದ ಗುಟ್ಟೇನು? ಅದರ ಮೈತುಂಬಾ ಕಾಣುವ ವಿಶಿಷ್ಟವಾಗಿರುವ ಜೇನು ಬಣ್ಣದ ಚೌಕುಳಿಗಳಲ್ಲಿದೆಯೇ? ಉದ್ದಕಾಲುಗಳು ಅಥವಾ ವಿಶಾಲಕಣ್ಣುಗಳ ಸೌಂದರ್ಯವೋ? ಈ ನೀಳಕಾಯದ ಪ್ರಾಣಿಯು ತಮ್ಮ ಸಂಕುಲದ ಸಂಖ್ಯೆಯನ್ನು ನಿಯಂತ್ರಿಸದೆ, ಎಲ್ಲಾ ವಯಸ್ಸಿನ ಜಿರಾಫೆಗಳೊಂದಿಗೆ ಸಲೀಸಾಗಿ ಗುಂಪುಜೀವನ ನಡೆಸುತ್ತದೆ. ಅನವಶ್ಯಕವಾಗಿ ಉಳಿದ ಪ್ರಾಣಿಗಳ ಮೇಲೆ ದಾಳಿ ನಡೆಸುವುದಿಲ್ಲ. ಭಾರೀ ಸಜ್ಜನ ಪ್ರಾಣಿ!

ಜಿರಾಫೆಯಷ್ಟೇ ವಿಶಿಷ್ಟವಾದ ಜ್ಯಾಮಿತ್ರಿ ವಿನ್ಯಾಸಗಳಿರುವ ಮತ್ತೊಂದು ಪ್ರಾಣಿ ಝೀಬ್ರಾ. ಇವು ಆಫ್ರಿಕಾ ದೇಶದ ಕಾಡುಗಳಲ್ಲಿ ಯಥೇಚ್ಛ. ಇವುಗಳನ್ನು ಸ್ವಾರ್ಥಿ ಹಾಗೂ ಮುಂಗೋಪಿ ಎಂದು ಕೀಗನ್ ಬಣ್ಣಿಸಿದನು. ಕುದುರೆಜಾತಿಯ ಝೀಬ್ರಾ ಪಳಗಿಸಲಿಕ್ಕೆ ಅಸಾಧ್ಯವಾದ ಪ್ರಾಣಿಯಂತೆ. ತನ್ನ ಮೇಲೆ ದಾಳಿ ನಡೆಸುವ ಸಿಂಹಕ್ಕೆ ಹಿಂದಿನ ತನ್ನೆರಡು ಕಾಲುಗಳಲ್ಲಿ ಒದ್ದರೆ ಅದರ ಗತಿ ಮುಗಿಯಿತೆಂದೇ ಲೆಕ್ಕ. ಒಮ್ಮೊಮ್ಮೆ ಎದುರಾಳಿಗಳನ್ನು ಕಚ್ಚಿ ಹಿಡಿಯುತ್ತವೆ. ಈ ಹಿಡಿತವೂ ಪ್ರಾಣಕ್ಕೆ ಕುತ್ತಾಗಬಹುದು. ಇವುಗಳ ಕೆಟ್ಟ ಗುಣಗಳು, ಪ್ರಾಣರಕ್ಷಣೆಯ ತಂತ್ರಗಳು ಏನೇ ಇರಲಿ – ಝೀಬ್ರಾ ಸುಂದರವಾದ ಪ್ರಾಣಿ. ತೆಳುಗಂಧದ ಬಣ್ಣದ ಹಿನ್ನೆಲೆಯ ಮೇಲೆ ಕಾಣುವ ಕಪ್ಪು ಪಟ್ಟಿಗಳು ಪ್ರತಿಯೊಂದು ಝೀಬ್ರಾದ ಮೇಲೂ ವಿಭಿನ್ನವಾಗಿರುತ್ತವೆ. ಮನುಷ್ಯಲೋಕದಲ್ಲಿ ಈ ರೇಖೆಗಳ ವಿನ್ಯಾಸಗಳನ್ನು ಟಾರುರಸ್ತೆಗಳ ಮೇಲೆ ಪಾದಚಾರಿಗಳು ರಸ್ತೆ ದಾಟುವ ಸೂಚನೆಗಳಿಗೆ ಬಳಸಿದ್ದಾರೆ. ವಸ್ತ್ರವಿನ್ಯಾಸಕರೂ ಈ ರೇಖೆಗಳನ್ನು ಬಳಸುತ್ತಾರೆ.

ದೂರದಲ್ಲಿ ದಪ್ಪಚರ್ಮದ ರೈನೊಗಳೆರಡಿದ್ದವು. ಅದರಲ್ಲಿದ್ದ ಒಂದು ರೈನೊವಿನ ಹೊಟ್ಟೆಯ ಭಾಗದಲ್ಲಿ ಆಳವಾದ ಗುರುತು. ಬಹುಶಃ ಅದು ಮತ್ತೊಂದು ರೈನೊ ಜೊತೆಗೆ ಕಾದಾಡಿದ ಗುರುತಿರಬೇಕು. ತಮಗೂ ಪ್ರಪಂಚದ ಯಾವ ವಿಷಯಗಳಿಗೂ ಸಂಬಂಧವಿಲ್ಲದಂತೆ ಕಲ್ಲಿನಲ್ಲಿ ಕಡೆದಂತೆ